LIST 'B'

STATEMENT SHOWING THE NO. OF HIGH SCHOOLS SANCTIONED DURING THE YEAR 1983—84 IN GULBARGA DIVISION

Sl. No.	Name of the District	Government	Non-Govt	Total
1	2	3	4	5
1.	Gulbarga	12	5	17
2.	Raichur	5	1	6
3.	Bidar	3	10	13
4.	Beilary	4	6	10
	Total	24	20	46

ವಿಷಯ.—ಮಾಲೂರಿನಲ್ಲಿ ತಾಂತ್ರಿಕ ವಿಜ್ಞಾನ ಶಾಲೆಯನ್ನು ಪ್ರಾರಂಭಿಸುವುದು.

೫೮. (೧೭) ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಸ್ಥಳೀಯ ಶಾಸಕರಿಂದ ಮಾಲೂರಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಬಗ್ಗೆ ಮನವಿ ಸರ್ಕಾರಕ್ಕೆ ಬಂದಿದೆಯೆ ?

(ಆ) ಹಾಗಿದ್ದರೆ ಸರ್ಕಾರಕ್ಕೆ ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು.

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಹೌದು.

(ಆ) ಕೋರಿಕೆಯನ್ನು ಪರಿಶೀಲಿಸಲಾಗಿತ್ತು ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವುದು ಸಾಧ್ಯವಾಗುವುದಿಲ್ಲ.

ವಿಷಯ.—ಕರ್ನಾಟಕ ರಾಜ್ಯದಲ್ಲಿ ಕೃಷಿ ಶಾಲೆಗಳನ್ನು ತೆರೆಯುವ ವಿಚಾರ.

೫೯. (೩೨) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ) ಮಾನ್ಯ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದ ಕೃಷಿಕರ ಮಕ್ಕಳು ಮೆಟ್ರಿಕ್ (ಎಸ್. ಎಸ್. ಎಲ್ ಸಿ.) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ನಂತರ ಎರಡು ವರ್ಷಗಳ ವ್ಯವಸಾಯ ತಂತ್ರ ಜ್ಞಾನವನ್ನು ಪಡೆಯುವಂತಾಗಲು ರಾಜ್ಯದಲ್ಲಿ ಕೃಷಿ ಶಾಲೆಗಳನ್ನು ತೆರೆಯಲು ಸರ್ಕಾರದವರು ಉದ್ದೇಶಿಸುವರೇ,

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕಾರ್ಯಕ್ರಮ ರೂಪಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

(ಅ) ಸಧ್ಯಕ್ಕಿಲ್ಲ.

(ಆ) ಮೇಲ್ಕಂಡ (ಅ) ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಹೆಚ್ಚಾಗಿ ವ್ಯವಸಾಯಗಾರರ ಮಕ್ಕಳು ಇರುವುದರಿಂದ ನಾನು ಕೇಳಿರುವುದೇನೆಂದರೆ, ವ್ಯವಸಾಯವನ್ನು ಹೇಳಿ ಕೊಡತಕ್ಕಂಥ ವ್ಯವಸಾಯ ಸ್ಕೂಲ್‌ಗಳನ್ನು ತೆರೆಯುತ್ತೀರಾ ಎಂದು ಕೇಳಿದ್ದಕ್ಕೆ ಮಾನ್ಯಮಂತ್ರಿಗಳು ಉತ್ತರ ಕೊಟ್ಟಿದ್ದು ನೋಡಿದರೆ,

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ವ್ಯವಸಾಯ ಕಾಲೇಜುಗಳನ್ನು ತೆಗೆಯುವ ಬಗ್ಗೆ ವಿಚಾರವಿರುವಂತೆ ಎಂದು ಕಾಣುತ್ತದೆ. ಎರಡು ವರ್ಷಗಳ ವ್ಯವಸಾಯ ಕೋರ್ಸ್ ಇರುವಂತಹ ಶಾಲೆಗಳನ್ನು ತೆರೆಯಬೇಕೆಂದು ನಾನು ಕೇಳಿದ್ದೇನೆ. ಆದ್ದರಿಂದ ವ್ಯವಸಾಯ ಶಾಲೆಗಳನ್ನು ತೆರೆಯುವುದಕ್ಕೆ ಮಾನ್ಯ ಮಂತ್ರಿಗಳು ಮನಸ್ಸು ಮಾಡುತ್ತಾರೆಯೇ ? ಮತ್ತು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ಏನು ಎಂಬುದು ನನಗೂ ಕೂಡ ಅರ್ಥವಾಗುತ್ತದೆ. ನಮ್ಮ ರಾಜ್ಯದಲ್ಲಿ ವ್ಯವಸಾಯಗಾರರು ಜಾಸ್ತಿ ಇರುವುದರಿಂದ ಆ ವ್ಯವಸಾಯಗಾರರು ಜಾಸ್ತಿ ಇರುವುದರಿಂದ ಆ ವ್ಯವಸಾಯಗಾರರ ಮಕ್ಕಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಎಸ್. ಎಸ್. ಎಲ್. ಸಿ. ಆದ ನಂತರ ಆಥನಾ ಪಿ. ಯು. ಸಿ. ಪಾಸಾದ ವಿದ್ಯಾರ್ಥಿಗಳಿಗೆ ವ್ಯವಸಾಯದ ಕೋರ್ಸ್ ತೆಗೆಯುವ ಬಗ್ಗೆ ಸಲಹೆ ಕೊಡಲು ಶ್ರೀಮಾನ್ ಜಿ. ವಿ ಕೆ ರಾವ್‌ರವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಲಾಗಿದೆ. ಆ ಸಮಿತಿಯವರು ಸರ್ಕಾರಕ್ಕೆ ತಮ್ಮ ವರದಿಯನ್ನು ಆದಷ್ಟು ಬೇಗ ಕೊಡುವವರಿದ್ದಾರೆ. ಅವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟ ನಂತರ ಇದನ್ನು ಆಲೋಚನೆ ಮಾಡಲಾಗುವುದು.

ಶ್ರೀ ಬಿ. ಬೈರಪ್ಪಾ ಜಿ.—ನೇಮಿಸಿರತಕ್ಕಂಥ ಸಮಿತಿಯವರು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ತಕ್ಷಣ ವ್ಯವಸಾಯ ಶಾಲೆಗಳನ್ನು ತೆರೆಯುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಸಮಿತಿಯನ್ನು ನೇಮಕ ಮಾಡಿದ್ದೇವೆ. ಅವರು ತಮ್ಮ ವರದಿಯನ್ನು ಆದಷ್ಟು ಬೇಗ ಕೊಡಲಿದ್ದಾರೆ. ಆದರೆ ಈ ವರ್ಷದಲ್ಲಿ ನಾವು ವ್ಯವಸಾಯ ಶಾಲೆಗಳನ್ನು ತೆರೆಯುವುದಕ್ಕೆ ಸಾಧ್ಯವಿಲ್ಲ. ಮುಂದಿನ ವರ್ಷ ಬೇಕಾದರೆ ನೋಡೋಣ.

ಶ್ರೀ ವೈ ರಾಮಕೃಷ್ಣ —ಈ ಸಮಿತಿಯನ್ನು ಯಾವಾಗ ನೇಮಕ ಮಾಡಿದ್ದೀರಿ ? ಈ ಕಮಿಟಿಯ ಟರ್ಮ್ಸ್ ಆಫ್ ರೆಫರನ್ಸ್ ಏನು ? ವ್ಯವಸಾಯ ಶಿಕ್ಷಣವನ್ನು ಪ್ರಾರಂಭ ಮಾಡಲು ಈಗಾಗಲೇ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಬಿ. ಎಲ್. ಸಧ್ಯಕ್ಕೆ ಈಗ ನನ್ನ ಹತ್ತಿರ ಆ ಬಗ್ಗೆ ಮಾಹಿತಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಿಂದಿನ ಸರ್ಕಾರವಿದ್ದಾಗಲೇ ಈ ಫೀಲಸ ಮಾಡಬೇಕೆಂದು ಆಲೋಚನೆ ಮಾಡಿತ್ತು. ಅಗ್ರಿಕಲ್ಚರ್ ಕಾಲೇಜುಗಳನ್ನು ಸ್ಥಾಪನೆ ಮಾಡುವ ಬಗ್ಗೆ

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವುದು ಕಾಲೇಜು ಪ್ರಶ್ನೆಯಲ್ಲ. ವ್ಯವಸಾಯ ಸ್ಕೂಲ್‌ಗಳನ್ನು ಪ್ರಾರಂಭ ಮಾಡುವ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾನು ಆ ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿನ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿಮಾಡುವುದು

೪೭ ಶ್ರೀ ಜಿ. ಎಸ್. ದೊಡ್ಡಮೇಟಿ (ರೋಣ)—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರ ಕೊರತೆಯ ಪ್ರತ್ಯೇಕ ಸಂಖ್ಯೆಯನ್ನು ಕೊಡುವುದು)

(ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ, (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ. ತರಗತಿ ಒಂದರಿಂದ ಏಳರವರೆಗಿನ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ–೧೫,೬೯೭.